ಕೆಲಸದಲ್ಲಿ ಅವರಿಗೆ ಜಯ ದೊರಕುವಂತೆ ಮಾಡಿದರೆ, ಅವರು ಮೊದಲಿಗೆ ಸೋತರೂ ಸೋಲಿನಿಂದ ಕಂಗೆಡದಂತೆ ನೋಡಿಕೊಂಡರೆ, ಅವರ ವಿಶ್ವಾಸಕ್ಕೆ ಆಘಾತವಾಗುವುದಿಲ್ಲ. ಇದಕ್ಕಾಗಿ ಅಧ್ಯಾಪಕರಲ್ಲಿ ತಾಳ್ಮೆ ಅಗತ್ಯ; ಶಿಕ್ಷಣದಲ್ಲಿ ವಿಶ್ವಾಸದ ಪಾತ್ರ ಹಿರಿದು. ಆತ್ಮರಕ್ಷಣೆ ಹಾಗೂ ಮುಂದಾಲೋಚನೆಗಳಿಗೆ ಭಯ ಒಂದು ಪ್ರಮಾಣದಲ್ಲಿ ಬೇಕಾದರೂ, ಅಸಂಗತವಾದ ಭಯ ನಮ್ಮನ್ನು ದುರ್ಬಲಗೊಳಿಸುವ ಜಾಡ್ಯ. ಇದಕ್ಕೆ ಶ್ರದ್ಧೆ ಮಾತ್ರವೇ ಮದ್ದು. ನಿತ್ಯಜೀವನದಲ್ಲಿ ಶ್ರದ್ಧೆ ಎಂದರೆ, ಆಸಕ್ತಿ ವಹಿಸಿ, ತನ್ಮಯತೆಯಿಂದ, ಪ್ರತಿಫಲಕ್ಕೆ ಅಪೇಕ್ಷೆ ಪಡದೆ, ಸಣ್ಣದು ದೊಡ್ಡದು ಎನ್ನದೆ ಕೆಲಸ ಮಾಡುವುದು; ಮಾಡಿದ ಕೆಲಸವು ತನ್ನ ಚಿತ್ತಕ್ಕೆ ಸಮಾಧಾನ ತರುವಂತೆ ನೋಡಿಕೊಳ್ಳುವುದು. ಭಗವದ್ಗೀತೆಯ ೧೭ನೇ ಅಧ್ಯಾಯವು ಕೇವಲ ಶ್ರದ್ಧೆಯ ಬಗ್ಗೆಯೇ ಇದೆ. ಶ್ರದ್ಧೆ ಅಂದರೆ ಏನು ಎಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣ ಹೀಗೆಂದಿದ್ದಾನೆ:

**ಸತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।**
**ಶ್ರದ್ಧಾಮಯೋಽಯಂ ಪುರುಷೋ**
**ಯೋ ಯಚ್ಛ್ರದ್ಧಃ ಸ ಏವ ಸಃ ॥ (೧೭: ೩)**

"ಅವರವರ ಅಂತಃಕರಣಕ್ಕೆ ಅನುರೂಪವಾಗಿ ಆಯಾ ಮನುಷ್ಯರ ಶ್ರದ್ಧೆ ಇರುತ್ತದೆ. ಅಂತಃಕರಣ ಶುದ್ಧವಾಗಿದ್ದರೆ ಮನುಷ್ಯ ಶ್ರದ್ಧಾವಂತನಾಗಿರುತ್ತಾನೆ."

ಶ್ರದ್ಧೆಯಿಲ್ಲದೆ ಮಾಡಿದ ಯಾವ ಕೆಲಸವೂ ಯಾರಿಗೂ ಶುಭಕರವಾಗಿರುವುದಿಲ್ಲ. ಅದನ್ನು ಅಸತ್ತು ಎನ್ನುತ್ತಾರೆ. (ಭಗವದ್ಗೀತೆ, ೧೭ : ೨೮).

ಶ್ರದ್ಧೆಯನ್ನು ಅಳವಡಿಸಿಕೊಳ್ಳಲು ಬಿಡದ ಅಡ್ಡಿಗಳು ನಾಲ್ಕು: **{ಅ} ಸೋಮಾರಿತನ {ಆ} ಅಡ್ಡದಾರಿ ಹಿಡಿಯುವುದು {ಇ} ಇದರಿಂದ ನಮಗೇನು ಪ್ರಯೋಜನ ಎಂಬ ಉಡಾಫೆ {ಈ} ಇಷ್ಟು ಕಷ್ಟಪಟ್ಟು ಯಾರಿಗಾಗಿ, ಏಕೆ ಮಾಡಬೇಕು ಎಂಬ ಅನಿಸಿಕೆ.** ಶ್ರದ್ಧಾವಂತನು 'ಇದು ನನ್ನ ಕರ್ತವ್ಯ' ಎಂಬ ದೃಢತೆಯಿಂದ ಕೆಲಸವನ್ನು ಪೂರೈಸುವನು. ಹಿಂದಿನವರ ಮಾದರಿ, ಸುಳುಹುಗಳು ಅವನಿಗೆ ಅವಶ್ಯವಿಲ್ಲ. ಡಿ.ವಿ.ಜಿ. ಹೇಳುವಂತೆ,

**ಭಕ್ತಿ ನಂಬುಗೆ ಸುಲಭ, ಭಜನೆ ವಂದನೆ ಸುಲಭ**
**ತತ್ತ್ವಶೋಧನೆ ಕಷ್ಟ; ಮತಿಕಾರ್ಯ ಕಷ್ಟ**
**ಸುತ್ತುವುದು ಸುಳುಹೆಂದು ಗಿರಿ ಸುತ್ತ ಲೋಕಜನ**
**ಹತ್ತುವನು ತಾಪಸಿಯು – ಮಂಕುತಿಮ್ಮ**

ಸದ್ಗುಣಗಳಿಂದಲೇ ನಿಜವಾದ ಯಶಸ್ಸು ಎನ್ನುವ ವಿಶ್ವದ ನೈತಿಕ ನಿಯಮದಲ್ಲಿ ಅಥವಾ ಧರ್ಮದಲ್ಲಿ ವಿಶ್ವಾಸ ತಾಳುವುದು ಸುಲಭವಲ್ಲ. ಕೆಟ್ಟವರು, ಮೋಸಗಾರರು, ಭ್ರಷ್ಟರು ತಾವು ಯಶಸ್ವಿಗಳೆಂದು ಮೆರೆಯುವಾಗ ಒಳ್ಳೆಯತನಕ್ಕೆ ಬೆಲೆ ಎಲ್ಲಿ ಎನ್ನಿಸುತ್ತದೆ. 'ಕರ್ತವ್ಯಭಾವನೆ', 'ಮಾಡುತ್ತಿರುವ ಕೆಲಸ ಸರಿಯಾದದ್ದು, ಮಾಡದೆ ಬಿಟ್ಟರೆ ಸಮಾಧಾನ ಇರದು' ಎಂಬ ವಿಶ್ವಾಸವೇ ನಮ್ಮನ್ನು ಮುನ್ನಡೆಸಬೇಕು. 'ನಾನು' ಎಂಬುದು ಇಲ್ಲವಾಗಬೇಕು.

**ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ**
**ಫಲಮೊಗೆವಂದು ತುತ್ತೂರಿ ದನಿಯಿಲ್ಲ**
**ಬೆಳಕೀವ ಸೂರ್ಯಚಂದಿರದೊಂದು ಸದ್ದಿಲ್ಲ**
**ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ.**

ಬಸವಣ್ಣನವರ ಕಾಯಕತತ್ತ್ವವು ಶ್ರದ್ಧಾವಂತರ ಜೀವನದಲ್ಲಿ ಎದ್ದು ತೋರುತ್ತದೆ. ಜೀವನಕ್ಕೆ ಅರ್ಥ ಬರುವುದು ಈ ಬಗೆಯ ಶ್ರದ್ಧಾಯುಕ್ತ ಕೆಲಸಗಳಿಂದಲೇ ಹೊರತು ಆಸ್ತಿ ಕೀರ್ತಿಗಳ ಗಳಿಕೆಯಿಂದಲ್ಲ.

**ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು**
**ದೊರೆತುದ ಹಸಾದವೆಂದುಣ್ಣು ಗೊಣಗಿಡದೆ**
**ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ**
**ಹೊರಡು ಕರೆ ಬರಲಳದೆ – ಮಂಕುತಿಮ್ಮ.** ✴


***Statement about ownership and other particulars about Viveka Prabha (according to Form IV Rule 8, circulated by Registrar of Newspapers for India)***

| | | |
|---|---|---|
| 1. Place of Publication | : | **Mysore 570 020** |
| 2. Periodicity of Publication | : | **Monthly** |
| 3. Printer's Name | : | **Swami Muktidananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 020** |
| 4. Publisher's Name | : | **Swami Muktidananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 020** |
| 5. Editor's Name | : | **Swami Vireshananda** |
| Nationality | : | **Indian** |
| Address | : | **Sri Ramakrishna Ashrama Yadavagiri Mysore 570 020** |
| 6. Name & Addresses of the individuals who own the newspaper and partners or share-holders holding more than % of the capital | : | **President, Sri Ramakrishna Ashrama, Yadavagiri Mysore 570 020** |

**I, Swami Mukidananda, hereby declare that the particulars given above are true to the best of my knowledge and belief.**


*Sd.*
***Swami Muktidananda***
01.03.2012 Signature of the Publisher


# ನಿರ್ಗತಿಕನ ನಿಸ್ವಾರ್ಥ ಸೇವೆ




**ಕಥೆ: ಸ್ವಾಮಿ ವಿಮೂರ್ತಾನಂದ  ಚಿತ್ರ: ಡಿ. ಶಿವಪ್ರಸಾದ್**

ಅದು ೧೮೯೧ನೇ ವರ್ಷ. ಸ್ವಾಮಿ ವಿವೇಕಾನಂದರು ಬಾಲಸೂರ್ಯನ ಹಾಗೆ, ಜ್ಞಾನಭಾಸ್ಕರನ ಹಾಗೆ ಭಾರತದೇಶವನ್ನೆಲ್ಲ ಪರ್ಯಟನೆ ಮಾಡುತ್ತಿದ್ದ ಕಾಲ. ಸ್ವಾಮೀಜಿ ರಾಜಾಸ್ಥಾನದ ಖೇತ್ರಿ ಪಟ್ಟಣದಲ್ಲಿ ವಾಸ ಮಾಡಿದ್ದಾಗ ಅಲ್ಲಿನ ಪ್ರಜೆಗಳು ತೀರ್ಥಕ್ಷೇತ್ರಕ್ಕೆ ಬಂದಂತೆ ನಿತ್ಯವೂ ಸ್ವಾಮಿ ವಿವೇಕಾನಂದರ ದರ್ಶನಾರ್ಥಿಗಳಾಗಿ ಗುಂಪುಗುಂಪಾಗಿ ಬರುತ್ತಿದ್ದರು.






4
ಸ್ವಾಮೀಜಿಯ ಸುತ್ತಲೂ ಸದಾ ಜನರೇ! ಹೀಗೆ ಕೆಲವು ಗಂಟೆಗಳು ಮಾತ್ರ ಅಲ್ಲ, ಮೂರು ದಿನಗಳವರೆಗೆ ಹಗಲೂ ರಾತ್ರಿಯೂ ಎಲ್ಲಾ ವರ್ಗಗಳ ಜನರು ಬಂದು ಸ್ವಾಮೀಜಿಯವರ ಅನುಗ್ರಹವನ್ನು ಪಡೆದು ತೃಪ್ತರಾಗಿ ಹೋದರು. ಇದನ್ನೆಲ್ಲಾ ಗಮನಿಸುತ್ತಿರುವ ಒಬ್ಬ ಚಮ್ಮಾರ ಹೀಗೆ ಯೋಚಿಸುತ್ತಿದ್ದಾನೆ:
ನಿಜವಾಗಿಯೂ ಈ ಸ್ವಾಮೀಜಿ ಒಬ್ಬ ದೊಡ್ಡ ಯೋಗಿಯೇ! ಇಲ್ಲದಿದ್ದರೆ ಮೂರು ದಿನಗಳು ಹಗಲೂ ರಾತ್ರಿ ಹೀಗೆ ಅವಿಶ್ರಾಂತವಾಗಿ ಮಾತನಾಡುತ್ತ ಇರಬಲ್ಲರೇನು?
5
ಮೂರನೇ ದಿನದ ಸಂಜೆಯ ವೇಳೆಗೆ ಸ್ವಾಮೀಜಿಯ ಹತ್ತಿರ ಸ್ವಲ್ಪ ಜನರು ಮಾತ್ರವೇ ಇದ್ದರು. ಆಗ ಆ ಚಮ್ಮಾರ ಸ್ವಾಮೀಜಿಯವರನ್ನು ಸಮೀಪಿಸಿ, ವಿನಯದಿಂದ ಕೈ ಮುಗಿದುಕೊಂಡು ಹೇಳಿದ:
ಸ್ವಾಮೀಜಿ! ನೀವು ಮೂರು ದಿನಗಳಿಂದ ಏನನ್ನೂ ತಿನ್ನಲಿಲ್ಲ, ನಿದ್ರಿಸಲಿಲ್ಲ. ಕನಿಷ್ಠ ಪಕ್ಷ ನೀರನ್ನೂ ಕುಡಿಯಲಿಲ್ಲ.
ಆ ನಿರ್ಗತಿಕನ ಅಭಿಮಾನವನ್ನು ನೋಡಿ ಸ್ವಾಮೀಜಿಗೆ ಸಂತೋಷವಾಯಿತು.
6
ಇಂತಹ ವ್ಯಕ್ತಿಗಳು ಇರುವುದರಿಂಲೇ ನಮ್ಮ ದೇಶ 'ಆಧ್ಯಾತ್ಮಿಕ ಭೂಮಿ'ಯಾಗಿ ಇಂದಿಗೂ ವಿರಾಜಮಾನವಾಗಿದೆ. ನನ್ನಿಂದ ಏನನ್ನಾದರೂ ಪಡೆಯಬೇಕೆಂಬ ಸ್ವಾರ್ಥಭಾವನೆಯಿಂದಲೇ ಉಳಿದವರೆಲ್ಲರೂ ಬಂದರು. ಆದರೆ, ನನ್ನ ಮೇಲೆ ಈತನು ಪ್ರೇಮದಿಂದ ಅದೆಂತಹ ಅಕ್ಕರೆಯನ್ನು ತೋರಿಸುತ್ತಿದ್ದಾನೆ!
7
ನಿನ್ನ ಅಭಿಮಾನಕ್ಕೆ ನಾನು ಕೃತಜ್ಞನಾಗಿದ್ದೇನೆ. ತಿನ್ನುವುದಕ್ಕೆ ನನಗೆ ಏನನ್ನಾದರೂ ಕೊಡುತ್ತೀಯ? ಸಂನ್ಯಾಸಿಯಾದ ನಾನು ಯಾರು ತಯಾರಿಸಿದ ಆಹಾರವನ್ನು ಬೇಕಾದರೂ ಸ್ವೀಕರಿಸಬಲ್ಲೆನು.
ಸ್ವಾಮೀಜಿ! ಹೀನಕುಲದವನಾದ ನಾನು ನಿಮಗೆ ಆಹಾರ ಕೊಟ್ಟಿರುವುದು ನಮ್ಮ ಮಹಾರಾಜರಿಗೆ ತಿಳಿದರೆ, ಅವರು ನನ್ನನ್ನು ಶಿಕ್ಷಿಸುತ್ತಾರೆ.


8
ಭಯಪಡಬೇಡ! ಹಾಗೇನೂ ಆಗದು. ಪ್ರೇಮದಿಂದ ನೀನು ಕೊಡುವ ಆಹಾರವೇ ಅತ್ಯುತ್ತಮವಾದುದು.
9
ಆ ಚಪ್ಪಲಿ ಹೊಲಿಯುವ ವ್ಯಕ್ತಿ ಸಂದೇಹಪಡುತ್ತಲೇ ಮನೆಗೆ ಹೋದನು.
10
ಮೂರು ದಿನಗಳಿಂದ ಸ್ವಾಮೀಜಿಯವರು ನೀರನ್ನು ಸಹ ಕುಡಿದಿಲ್ಲ. ನಾನು ಕೊಟ್ಟ ಆಹಾರವನ್ನೇ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾರೆ. ಇದು ಮಹಾರಾಜರಿಗೆ ತಿಳಿದರೆ ಅವರ ಕೋಪಕ್ಕೆ ಎಲ್ಲಿ ಗುರಿಯಾಗುತ್ತೇನೆಯೋ ಎಂದು ನನಗೆ ಭಯವಾಗುತ್ತಿದೆ.
ನಾವೇಕೆ ಭಯಪಡಬೇಕು? ಒಬ್ಬ ಶ್ರೇಷ್ಠ ಸ್ವಾಮೀಜಿಯವರಿಗೆ ಊಟ ಕೊಟ್ಟುದಕ್ಕೆ ನಮಗೆ ಸೆರೆಮನೆಯೇ ಗತಿಯಾದರೂ ಚಿಂತೆಯಿಲ್ಲ.
11
ಆ ಚಮ್ಮಾರ ಮತ್ತು ಆತನ ಹೆಂಡತಿ – ಇಬ್ಬರೂ ಸೇರಿ ತಾವು ಮಾಡಿದ ಸರಳ ಆಹಾರವನ್ನು ತಂದು ಸ್ವಾಮೀಜಿಯವರಿಗೆ ಅರ್ಪಿಸಿದರು.
ನೀವು ಪ್ರೇಮದಿಂದ ತಯಾರಿಸಿಕೊಟ್ಟ ಆಹಾರ ಅಮೃತಕ್ಕಿಂತಲೂ ರುಚಿಯಾಗಿದೆ.
ಮಹಾರಾಜರೇ ಸ್ವತಃ ಬಂದು, “ನೀವು ಮಾಡಿರುವುದು ತಪ್ಪು” ಎಂದು ಕಠೋರ ಶಿಕ್ಷೆಗೆ ಗುರಿಪಡಿಸಿದರೂ ಕೂಡ ನಮಗಿನ್ನು ಭಯವಿಲ್ಲ. ನಮಗೆ ಬೇಕಾಗಿರುವುದು ನಿಮ್ಮ ಅನುಗ್ರಹ ಮಾತ್ರ, ಸ್ವಾಮೀಜಿ!
12
ಸ್ವಾಮೀಜಿ ಆ ದಂಪತಿಗಳಿಬ್ಬರನ್ನೂ ಮನಸಾರೆ ಆಶೀರ್ವದಿಸಿದರು. ಒಂದೆರಡು ದಿನಗಳಲ್ಲೇ ಸ್ವಾಮೀಜಿಯವರ ಮಹಿಮೆ ಖೇತ್ರಿ ರಾಜನಾದ ಅಜಿತ್ ಸಿಂಗ್‌ನಿಗೆ ತಿಳಿದುಬಂತು. ರಾಜನು ಅವರಿಗೆ ಗೌರವದಿಂದ ರಾಜಭವನದಲ್ಲೇ ವಸತಿಗೆ ಏರ್ಪಾಡು ಮಾಡಿದನು.